# ಜೀವನೋತ್ಸಾಹ

ನಮ್ಮ ಬದುಕಿನಲ್ಲಿ ಬಾಲ್ಯ, ತಾರುಣ್ಯಗಳ ಘಟ್ಟವೆಂಬುದು ಕನಸು ಕಾಣುವ ಕಾಲವಷ್ಟೇ ಅಲ್ಲ, ಜೀವನವನ್ನು ಆಸ್ವಾದಿಸುವ ಕಾಲವೆನ್ನಬಹುದು, ನಾವು ಯೌವನಕ್ಕೆ ಕಾಲಿರಿಸುವಾಗ ಬದುಕಿನ ವಾಸ್ತವಗಳು, ಸಮಸ್ಯೆಗಳೂ ಎದುರಾಗುತ್ತವೆ. ಹೀಗಾಗಿ ಯೌವನ ಜೀವನವನ್ನು ಆಸ್ವಾದಿಸುವ ಕಾಲವೆನ್ನಿಸಿದರೂ, ಅದೊಂದು ಹೋರಾಟದ ಕಾಲವೂ ಹೌದು. ಬಾಲ್ಯ, ತಾರುಣ್ಯಗಳ ಏರಿಕೆಯ ದಾರಿಯಲ್ಲಿ ನಡೆದು, ಯೌವನದ ಶಿಖರವನ್ನು ತಲುಪಿದ ನಂತರ, ಮುಂದೆಲ್ಲಾ ಇಳಿಕೆಯ ಪಯಣ. ವೃದ್ಧಾಪ್ಯದ ಕಾಲಘಟ್ಟದಲ್ಲಿ ಮನುಷ್ಯ ದೈಹಿಕವಾಗಿ ಕುಗ್ಗಿರುತ್ತಾನೆ; ಮಾನಸಿಕವಾಗಿ ಬಳಲಿರುತ್ತಾನೆ. ಕನಸುಗಳಂತೂ ಆತನಿಂದ ದೂರವೇ ಉಳಿದಿರುತ್ತವೆ. ಎಲ್ಲಕ್ಕೂ ಮುಖ್ಯವಾಗಿ ಕ್ರಿಯಾಶೀಲತೆಯ ಮೂಲ ದ್ರವ್ಯವಾಗಿರುವ ಜೀವನೋತ್ಸಾಹ ಕ್ಷೀಣಿಸಿರುತ್ತದೆ. ಹೀಗಾಗಿ ಮುಪ್ಪು ಬಹಳಷ್ಟು ಮನುಷ್ಯರಲ್ಲಿ– ನಕಾರಾತ್ಮಕ ಚಿಂತನೆಯನ್ನು ಪ್ರಚೋದಿಸಿ, ಜೀವನ ವಿಮುಖರನ್ನಾಗಿ ಮಾಡುತ್ತದೆ.

ಆದರೆ, ಕೊನೆಯ ಕ್ಷಣದವರೆಗೂ ಬದುಕಿನಲ್ಲಿ ಲವಲವಿಕೆಯನ್ನು ಕಾಪಾಡಿಕೊಂಡು, ತಾವೂ ಚಟುವಟಿಕೆಯಿಂದ ಬದುಕಿ, ತಮ್ಮ ಜೊತೆಯವರನ್ನೂ ಗೆಲುವಾಗಿರಿಸುವ ವ್ಯಕ್ತಿಗಳೂ ಕೆಲವರಿರುತ್ತಾರೆ. 'ಮುಪ್ಪೆಂಬುದೇ ಇಲ್ಲ, ಮರಣ ಖಂಡಿತ ಇಲ್ಲ' ಎಂದು ದೃಢವಾಗಿ ನಂಬಿ, ಅದರಂತೆ ನಡೆಯುವ ಇಂಥ ವಿರಳ ವ್ಯಕ್ತಿಗಳಿಂದ ಒಂದು ಬಗೆಯ ಜೀವನ್ಮುಖೀ ಕಿರಣಗಳು ಪ್ರಸರಣಗೊಳ್ಳುತ್ತವೆ ಎನ್ನಬಹುದು. 'ತಾವು ಚಿರಂಜೀವಿಗಳೆಂದು ನಂಬುವ ಮನುಷ್ಯರನ್ನು ನಾನು ಅತ್ಯಂತ ಗೌರವದಿಂದ ಕಾಣುತ್ತೇನೆ' ಎನ್ನುತ್ತಾನೆ ಬ್ರಿಟಿಷ್ ಕಾದಂಬರಿಕಾರ ಇ.ಎಂ. ಫಾರ್ಸ್ಟರ್, ಹತಾಶೆಯಿಂದ ಜೋಲುಮುಖ ಹಾಕಿಕೊಂಡು, ಮೃತ್ಯು ಭೀತಿಯಿಂದ ಕುಗ್ಗಿ ಹೋಗಿರುವ ಜನಗಳೇ ತುಂಬಿರುವ ಸಮಾಜ ನಿರ್ವಿಣ್ಣ ಹಾಗೂ ನಿಷ್ಕ್ರಿಯವಾಗುತ್ತದೆ. ಉತ್ಸಾಹ ಲವಲವಿಕೆಗಳಿಂದ ಸುತ್ತಲಿರುವವರನ್ನು ಉತ್ತೇಜಿಸುತ್ತಾ, ಇತ್ಯಾತ್ಮಕ ಭಾವವನ್ನು ಬಿತ್ತುವ ಜನರಿರುವ ಸಮಾಜ ಎಲ್ಲ ದಿಕ್ಕುಗಳಲ್ಲಿಯೂ ಮೇಲ್ಮೆ ಪಡೆಯುತ್ತದೆ.

ಜೀವನೋತ್ಸಾಹವೆಂಬ ಅದ್ಭುತ ಟಾನಿಕ್ ಮನುಷ್ಯನಿಗೆ ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಚೈತನ್ಯವನ್ನು ಒದಗಿಸುತ್ತದೆ, ಆದರೆ ಅದನ್ನು ಜೀವನದ ಎಲ್ಲ ಹಂತಗಳಲ್ಲಿಯೂ ನಮ್ಮೊಡನೆ ಉಳಿಸಿಕೊಳ್ಳುವುದು ಅಷ್ಟೊಂದು ಸುಲಭವಲ್ಲ. ಮುಪ್ಪಿನಲ್ಲೂ ತನ್ನ ಚೈತನ್ಯ ಕುಗ್ಗಿಲ್ಲ, ಕ್ರಿಯಾಶೀಲತೆ ಕುಂಠಿತಗೊಂಡಿಲ್ಲ, ನೆನಪಿನ ಶಕ್ತಿ ಕ್ಷೀಣಿಸಿಲ್ಲ, ತಾನು ಪರಾವಲಂಬಿಯಾಗಿಲ್ಲ– ಹೀಗೆ ದೃಢವಾಗಿ ನಂಬಿರುವಾತ ಆರೋಗ್ಯಪೂರ್ಣ ಜೀವನ ನಡೆಸಬಲ್ಲ ಎನ್ನುತ್ತಾರೆ ಮನಶಾಸ್ತ್ರಜ್ಞರು. ಇಂಥ 'ಜೀವನ್ಮುಖಿ'ಗಳು ತಮ್ಮ ಸುತ್ತ ಇರುವವರ ಸಂತಸ ಸಂಕಟಗಳಲ್ಲಿ ಮನಪೂರ್ವಕವಾಗಿ ಭಾಗಿಯಾಗುತ್ತಾರೆ. ಅವರ ಕಷ್ಟದ ಸಂದರ್ಭಗಳಲ್ಲಿ ತಮ್ಮ ಕೈಲಾದಷ್ಟು ನೆರವನ್ನು ನೀಡುತ್ತಾರೆ; ಪ್ರಾಮಾಣಿಕವಾದ ರೀತಿಯಲ್ಲಿ ಅವರನ್ನು ಸಾಂತ್ವನಗೊಳಿಸುತ್ತಾರೆ. ಸಂತೋಷದ ಕ್ಷಣಗಳಲ್ಲಿ ಯಾವುದೇ ಅಸೂಯೆ, ಕೊಂಕುಗಳಿಲ್ಲದೇ ಪಾಲ್ಗೊಳ್ಳುತ್ತಾರೆ.

ನಮ್ಮ ಬದುಕಿನ ಪರಿಧಿ ವಿಸ್ತೃತವಾಗಬೇಕಾದರೆ, ನಮ್ಮ ಜಗತ್ತು ನಮ್ಮ ಪಾಲಿಗೆ ಆಸ್ವಾದನೀಯವಾಗಬೇಕಾದರೆ, ಜೀವನೋತ್ಸಾಹ ಅತ್ಯಂತ ಅಗತ್ಯ. ಹಣ, ಅಧಿಕಾರ, ಅಂತಸ್ತು– ಇತ್ಯಾದಿ ಯಾವುದೂ ಜೀವನೋತ್ಸಾಹವನ್ನು ಸರಿಗಟ್ಟಲಾರದೆಂಬುದು ಸತ್ಯ, ಇರುವಷ್ಟರಲ್ಲಿಯೇ ಮಹತ್ತನ್ನು ಕಾಣುವ 'ದಿವ್ಯ ದೃಷ್ಟಿ' ನಮಗೆ ಲಭ್ಯವಾಗುವುದು ಜೀವನೋತ್ಸಾಹದಿಂದಲೇ. ನಿರುತ್ಸಾಹದಿಂದ ಬಳಲುವ ವ್ಯಕ್ತಿ ತಾನೂ ಕುಗ್ಗುವುದಲ್ಲದೆ, ತನ್ನ ಸುತ್ತಲೂ ನಿರುತ್ಸಾಹದ ಪರಿವೇಷವನ್ನೇ ಸೃಷ್ಟಿಸಿಬಿಡುತ್ತಾನೆ. ಚಳಿಗಾಲದಲ್ಲಿ ಎಲೆಗಳು ಮುರುಟಿಕೊಳ್ಳುವಂತೆ ಜೀವನೋತ್ಸಾಹವಿಲ್ಲದ ಮನುಷ್ಯ ಬಣ್ಣವನ್ನು ಕಳೆದುಕೊಂಡು ಮುರುಟಿ, ನೆಲಕ್ಕಂಟಿದ ತರಗೆಲೆಯಂತಾಗುತ್ತಾನೆ.

ಜೀವನೋತ್ಸಾಹವನ್ನು ಕುರಿತು ಯೋಚಿಸಿದಾಗೆಲ್ಲಾ ಮಹಾಭಾರತದ ವೃದ್ಧ ಪಿತಾಮಹ ಭೀಷ್ಮರ ನೆನಪಾಗುತ್ತದೆ. ಕುರುಕ್ಷೇತ್ರ ಯುದ್ಧದಲ್ಲಿ ಮೊದಲ ಕೌರವ ಸೇನಾಧಿಪತಿಯಾದ ಭೀಷ್ಮರು ದೈಹಿಕವಾಗಿ– 'ತೊಗಲು ಸಡಿಲಿದ, ಗಲ್ಲ ಬತ್ತಿದ, ಹೆಗಲು ನರಕಿದ, ನೆರೆತ ಮೀಸೆಯ, ಜಗುಳ್ದ ಹಲ್ಲುಗಳ'– ಹಣ್ಣು ಮುದುಕರು. ಆದರೆ ಸೇನಾಪತಿಯಾಗಿ ಅವರು ಯುವಕರಲ್ಲಿ ಯುವಕರು. 'ಪ್ರತಿ ದಿನವೂ ಶತ್ರು ಸನ್ಯದಲ್ಲಿರುವ ಸಾವಿರ ರಾಜರುಗಳನ್ನು ಸಂಹರಿಸುತ್ತೇನೆ; ಆಯುಧವನ್ನು ಹಿಡಿಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿರುವ ಕೃಷ್ಣನಿಂದ ಚಕ್ರವನ್ನು ಹಿಡಿಸುತ್ತೇನೆ; ಅರ್ಜುನನ ರಥವನ್ನು ಹಿಂದಕ್ಕೆ ಓಡುವಂತೆ ಮಾಡುತ್ತೇನೆ' ಎಂಬ ತಮ್ಮ ಪ್ರತಿಜ್ಞೆಯನ್ನು ಅಕ್ಷರಶಃ ನೆರವೇರಿಸಿದ ಭೀಷ್ಮರು ಜೀವನೋತ್ಸಾಹಕ್ಕೆ ಒಂದು ಜ್ವಲಂತ ಉದಾಹರಣೆ!

■ **ವೈನತೇಯ**

## ಮಾತೇ ಮುತ್ತು

★ ಪ್ರಪಂಚದಲ್ಲಿ ಅತ್ಯುತ್ತಮ ಹಾಗೂ ಅತ್ಯಂತ ಸುಂದರ ವಸ್ತುವನ್ನು ನೋಡಲು ಅಥವಾ ಸ್ಪರ್ಶಿಸಲೂ ಆಗುವುದಿಲ್ಲ; ಅದನ್ನು ಅನುಭವಿಸಬಹುದು, ಅಷ್ಟೆ!

–ಹೆಲನ್ ಕೆಲ್ಲರ್

★ ಕೇವಲ ಎರಡು ವಿಷಯಗಳು ಮಾತ್ರ ಅಮೂರ್ತವಾದದ್ದು; ಈ ಜಗತ್ತು ಮತ್ತು ಮನುಷ್ಯನ ಮೂರ್ಖತನ. ಅದರಲ್ಲಿ ಮೊದಲನೆಯದ್ದು ನನಗೆ ಖಚಿತವಾಗಿದೆ.

–ಆಲ್ಬರ್ಟ್ ಐನ್‌ಸ್ಟೀನ್

★ ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.

–ಕುವೆಂಪು

★ ಒಳ್ಳೆಯ ವ್ಯಕ್ತಿಗಳಿಗೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಹೇಳಲು ಕಾನೂನುಗಳ ಅಗತ್ಯವಿಲ್ಲ. ಕೆಟ್ಟ ವ್ಯಕ್ತಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ದಾರಿ ಕಂಡುಕೊಂಡಿರುತ್ತಾರೆ.

– ಪ್ಲೇಟೋ

★ ಒಂದು ವಿಷಯದ ಬಗ್ಗೆ ಸತ್ಯ ಸಾಬೀತಾಗುವುದರೊಳಗೆ ಅದು ಸುಳ್ಳಾಗಿ ಅರ್ಧ ಜಗತ್ತನ್ನೇ ಸುತ್ತಾಡಿಬಿಟ್ಟಿರುತ್ತದೆ.

–ವಿನ್‌ಸ್ಟನ್ ಚರ್ಚಿಲ್

★ ಹೆಚ್ಚು ಶ್ರಮ ಪಟ್ಟು ಕೆಲಸ ಮಾಡಿದಷ್ಟೂ ಅದೃಷ್ಟ ನನ್ನ ಪರವಾಗಿರುತ್ತದೆ.

–ಥಾಮಸ್ ಜಫರ್ಸನ್

★ ಯಾರಾದರೂ ಕೃತಘ್ನರಾದರೆ ಅದು ಅವರ ದೋಷ. ಆದರೆ, ನೀನು ಸಜ್ಜನಿಕೆ ತೋರದಿದ್ದರೆ ಅದು ನಿನ್ನ ದೋಷ.

– ಅ.ನ.ಕೃಷ್ಣರಾಯ

★ ಮೊಬೈಲ್ ನೆಟ್ ವರ್ಕ್‌ಅನ್ನು ಆಯ್ದುಕೊಳ್ಳುವಾಗ ನಾವು ಏರ್‌ಟೆಲ್ ಅಥವಾ ವೊಡಾಫೋನ್ ಯಾವ ಜಾತಿ ಎಂದು ನೋಡುವುದಿಲ್ಲ. ಅದರ ಸೇವೆ ಮತ್ತು ಜಾಲವನ್ನು ಮಾತ್ರ ಗಮನಿಸುತ್ತೇವೆ. ಆದರೆ ವೋಟ್ ಹಾಕುವಾಗ ಮಾತ್ರ ಏಕೆ ನಮ್ಮ ಜಾತಿಯವರಾ ಎಂದು ನೋಡುತ್ತೇವೆ?

–ಚೇತನ್ ಭಗತ್

★ ಜಗತ್ತಿನ ಬಹುತೇಕ ಎಲ್ಲ ದೇಶಗಳಲ್ಲೂ ನಾನು ಜಾತಿಗಳನ್ನು ನೋಡಿದ್ದೇನೆ. ಆದರೆ ಜಾತಿಗಳ ಯೋಜನೆ ಮತ್ತು ಉದ್ದೇಶಗಳು ಭಾರತದಲ್ಲಿ ಮಾತ್ರ ಇತರೆಲ್ಲ ದೇಶಗಳಿಗಿಂತ ಹೆಚ್ಚು ವೈಭವೀಕರಣಗೊಂಡಿವೆ. ಮಗ ಯಾವತ್ತೂ ಅಪ್ಪನ ಕೆಲಸವನ್ನೇ ಮುಂದುವರಿಸುವ ಪದ್ಧತಿಯಿಂದಾಗಿ ಇಲ್ಲಿ ಜಾತಿ ಬೆಳೆದಿದೆ.

–ಸ್ವಾಮಿ ವಿವೇಕಾನಂದ

★ ನನ್ನನ್ನು ನನ್ನ ಗೆಳೆಯರಿಂದ ರಕ್ಷಿಸಿ; ನಾನು ನಿಮ್ಮನ್ನು ವೈರಿಗಳಿಂದ ರಕ್ಷಿಸುತ್ತೇನೆ.

–ಟಿಪ್ಪೂ ಸುಲ್ತಾನ್

★ ಒಳ್ಳೆಯ ಕೆಲಸಗಳನ್ನು ಮಾಡಿದ ಯಾರೂ ಈ ಲೋಕದಲ್ಲಿ ಅಥವಾ ಮುಂಬರುವ ಲೋಕದಲ್ಲಿ ಕೆಟ್ಟ ಅಂತ್ಯವನ್ನು ಕಾಣುವುದಿಲ್ಲ.

–ಭಗವದ್ಗೀತೆ

★ ನಮ್ಮ ಮಾತಿಗಿಂತ ನಮ್ಮ ಜೀವನವನ್ನೇ ನಮ್ಮ ವಿಷಯವಾಗಿ ಮಾತನಾಡಲು ಬಿಡುವುದು ಉತ್ತಮ.

–ಗಾಂಧೀಜಿ